ವರದಿ ನೀಡಿದ ನಂತರ ಯಶಸ್ವಿನಿ ಟ್ರಸ್ಟ್ ಪರಿಶೀಲಿಸಿ ಮುಂದಿನ ಕ್ರಮಕೈಗೊಳ್ಳುತ್ತದೆ. ಆ ಸಮಯದಲ್ಲಿ ಹೆರಿಗೆಗೆ ಈಗ ಇರುವ ಚಿಕಿತ್ಸೆ ದರದ ಬಗ್ಗೆಯೂ ಪರಿಶೀಲಿಸಲಾಗುವುದು.

ರೈತರ ಚೀನಾ ಪ್ರವಾಸ ಯೋಜನೆ

55(161); ಶ್ರೀ ಗೋಪಾಲಯ್ಯ ಕೆ

ಅ) ರಾಜ್ಯದಲ್ಲಿನ ರೈತರನ್ನು ಚೀನಾ ಪ್ರವಾಸಕ್ಕೆ ಕಳುಹಿಸುವ ಯೋಜನೆ ಯಾವಾಗ ಪ್ರಾರಂಭವಾಯಿತು;

ಆ) ಈ ಯೋಜನೆಯಡಿ ಎಷ್ಟು ರೈತರು ಚೀನಾ ಹಾಗೂ ಇತರ ವಿದೇಶಗಳಿಗೆ ಪ್ರವಾಸ ಕೈಗೊಂಡು ಅಲ್ಲಿನ ಕೃಷಿ ಅಭಿವೃದ್ಧಿ ಬಗ್ಗೆ ಅಧ್ಯಯನ ನಡೆಸಿದ್ದಾರೆ; ಇದಕ್ಕಾಗಿ ಇಲ್ಲಿಯವರೆಗೆ ಖರ್ಚಾರದ ಹಣವೆಷ್ಟು;

ಇ) ಈ ಯೋಜನೆಯನ್ನು ರದ್ದುಗೊಳಿಸಲಾಗಿದೆಯೇ;

ಈ) ಹಾಗಿದ್ದಲ್ಲಿ ಕಾರಣಗಳೇನು;

ಉ) ರಾಜ್ಯದ – ರೈತರನ್ನು ಚೀನಾ ಮುಂತಾದ ವಿದೇಶಗಳಿಗೆ ಇಲ್ಲಿನ ಕೃಷಿ ಅಭಿವೃದ್ಧಿ ಬಗ್ಗೆ ತಿಳಿಯಲು ಕಳುಹಿಸುವ ಯೋಜನೆಯನ್ನು ಪುನರಾಂಭಗೊಳಿಸಲಾಗುವುದೇ;

ಶ್ರೀ ಕೃಷ್ಣ ಭೈರೇಗೌಡ (ಕೃಷಿ ರಾಜ್ಯ ಸಚಿವರು)

ಅ) ರಾಜ್ಯದಲ್ಲಿನ ರೈತರನ್ನು ಚೀನಾ ಪ್ರವಾಸಕ್ಕೆ ಕಳುಹಿಸುವ ಯೋಜನೆ 2008–09ನೇ ಸಾಲಿನಲ್ಲಿ ಪ್ರಾರಂಭವಾಯಿತು.

ಆ) ಈ ಯೋಜನೆಯಡಿ 1406 ರೈತರು ಚೀನಾ ಹಾಗೂ ಇಸ್ರೇಲ್ ದೇಶಗಳಿಗೆ ಅಲ್ಲಿನ ಕೃಷಿ ಅಭಿವೃದ್ಧಿ ಬಗ್ಗೆ ಅಧ್ಯಯನ ನಡೆಸಲು ಪ್ರವಾಸ ಕೈಗೊಂಡಿರುತ್ತಾರೆ. ಇದಕ್ಕಾಗಿ ಇಲ್ಲಿಯವರೆಗೆ ₹ 958.88 ಲಕ್ಷಗಳು ವೆಚ್ಚವಾಗಿರುತ್ತದೆ.

ಇ) ರೈತರಿಗೆ ಏರ್ಪಡಿಸಿದ್ದ ವಿದೇಶ ಪ್ರವಾಸ ಕಾರ್ಯಕ್ರಮವನ್ನು ತಡೆಹಿಡಿಯಲಾಗಿದೆ.

ಈ) ದೇಶದೊಳಗಿನ ಇತರೆ ರಾಜ್ಯಗಳಲ್ಲಿ ಉತ್ತಮ ಪದ್ಧತಿಗಳಿದ್ದು, ಅಲ್ಲಿ ಅಳವಡಿಸಲಾಗುತ್ತಿರುವ ಆಧುನಿಕ ಅತ್ಯುತ್ತಮ ಕೃಷಿ ತಾಂತ್ರಿಕತೆಗಳು ಮತ್ತು ಸುಧಾರಿತ ಬೇಸಾಯ ಪದ್ಧತಿಗಳ ಬಗ್ಗೆ ಅರಿವು ಮೂಡಿಸಲು ರೈತರನ್ನು ಕಳುಹಿಸಲು ಕ್ರಮ ಕೈಗೊಳ್ಳಲಾಗಿರುವುದರಿಂದ ವಿದೇಶ ಪ್ರವಾಸ ಕಾರ್ಯಕ್ರಮವನ್ನು ತಡೆಹಿಡಿಯಲಾಗಿದೆ.

ಉ) ವಿದೇಶಿಗಳಿಗೆ ರೈತರನ್ನು ಕಳುಹಿಸುವ ಕಾರ್ಯಕ್ರಮಗಳ ಬಗ್ಗೆ ಪರಿಶೀಲಿಸಲಾಗುವುದು.

ಕಬ್ಬನ್ ಪಾರ್ಕ್ ಅಭಿವೃದ್ಧಿ ಪ್ರಾಧಿಕಾರ ರಚನೆ

56(162); ಶ್ರೀ ಗೋಪಾಲಯ್ಯ. ಕೆ

ಅ) ಬೆಂಗಳೂರಿನ ಕಬ್ಬನ್ ಪಾರ್ಕ್‌ನ ವಿಸ್ತೀರ್ಣ ಎಷ್ಟು;

ಆ) ಈ ಉದ್ಯಾನವನದ ಅಭಿವೃದ್ಧಿಗಾಗಿ 2012–13 ಹಾಗೂ 2013–14ರಲ್ಲಿ ಇಲ್ಲಿಯವರೆಗೆ ಖರ್ಚು ಮಾಡಿದ ಹಣವೆಷ್ಟು;

ಇ) ಈ ಉದ್ಯಾನವನದ ಅಭಿವೃದ್ಧಿಗಾಗಿ ಪ್ರತ್ಯೇಕ ಪ್ರಾಧಿಕಾರ ರಚಿಸಲು ಸರ್ಕಾರ ಉದ್ದೇಶಿಸಿದೆಯೇ;

ಈ) ಹಾಗಿದ್ದಲ್ಲಿ, ಕಾರಣಗಳೇನು;

ಉ) ಈ ರೀತಿ ಕಬ್ಬನ್ ಪಾರ್ಕ್ ಅಭಿವೃದ್ಧಿ ಪ್ರಾಧಿಕಾರ ರಚಿಸಿದರೆ ಅದಕ್ಕೆ ಪ್ರತಿ ವರ್ಷ ತಗಲುವ ಆಡಳಿತಾತ್ಮಕ ಅಂದಾಜು ವೆಚ್ಚವೆಷ್ಟು;

ಊ) ತೋಟಗಾರಿಕೆ ಇಲಾಖೆ ಈ ಉದ್ಯಾನವನವನ್ನು ಸಮರ್ಪಕವಾಗಿ ನಿರ್ವಹಣೆ ಮಾಡುತ್ತಿಲ್ಲವೇ;

ಋ) ಈ ರೀತಿ ಈ ಉದ್ಯಾನವನದ ನಿರ್ವಹಣೆಗಾಗಿ ಪ್ರತ್ಯೇಕ ಪ್ರಾಧಿಕಾರ ರಚಿಸುವುದಕ್ಕೆ ವಿವಿಧ ಸಂಘಟನೆಗಳು ವಿರೋಧ ವ್ಯಕ್ತಪಡಿಸಿದೆಯೇ;